ದಿನಾಂಕಃ **12-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಆರ್.ಎಸ್.ರವರಿಂದ ಃ

**1.** ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ನಾನು ವ್ಯವಸಾಯಗಾರ. ವಾದಿ ಚಿಕ್ಕತಮ್ಮೇಗೌಡ ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ವಾದಿ ಮತ್ತು ನಾನು ಒಂದೇ ಊರಿನವರು. ಪ್ರತಿವಾದಿ ಬೀರಶೆಟ್ಟಹಳ್ಳಿ ಡಿಪೋ ಹತ್ತಿರ ಬರುತ್ತಿದ್ದರು, ಆ ಕಾರಣ ಪರಿಚಯ. ಪ್ರತಿವಾದಿಯು ಮೈಸೂರಿನವರು. ಪ್ರತಿವಾದಿ ಯಾವ ಉದ್ದೇಶಕ್ಕಾಗಿ ಪಾಂಡವಪುರಕ್ಕೆ ಬರುತ್ತಿದ್ದರು ನನಗೆ ಗೊತ್ತಿಲ್ಲ. ವಾದಿಯು ಪ್ರತಿವಾದಿಗೆ ರಾಮಮೂರ್ತಿರವರು ಕಛೇರಿಯಲ್ಲಿ ಹಣ ಕೊಟ್ಟರು. ಆಗ ಮದ್ಯಾಹ್ನ 12.00 ಗಂಟೆಯಾಗಿತ್ತು. ಆಗ ನಾನು ಮತ್ತು ಕೃಷ್ಣ ಹಾಜರಿದ್ದೆವು. ವಾದಿ ಪ್ರತಿವಾದಿಗೆ ನಗದು ರೂಪದಲ್ಲಿ ಹಣವನ್ನು ಕೊಟ್ಟರು. ನನ್ನ ಸಮಕ್ಷಮ ಒಂದೇ ಕಂತಿನಲ್ಲಿ ಹಣ ಕೊಟ್ಟರು. ಎಲ್ಲ ರೂ.500/- ಮುಖಬೆಲೆಯ ನೋಟುಗಳಾಗಿದ್ದವು. ನಿಪಿ-1 ನ್ನು ರಾಮಮೂರ್ತಿರವರು ಬರಹ ಮಾಡಿದರು. ರಾಮಮೂರ್ತಿರವರು ತನ್ನ ಕೈ ಬರವಣಿಗೆಯಲ್ಲಿ ದಾಖಲೆಯನ್ನು ಬರೆದುಕೊಂಡರು. ನಿಪಿ-1 ಕ್ಕೆ ನಾನು ಮತ್ತು ಕೃಷ್ಣ ಸಹಿ ಹಾಕಿದ್ದೇವೆ. ನಾನು ಮತ್ತು ವಾದಿ ಸ್ನೇಹಿತರು ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೇನು ಗೊತ್ತಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**